Major Irrigation Projects contemplated to be taken up during the III Five-Year Plan in the State.

*Q.—244. Sri M. C. BASAPPA (Chamarajanagar).—

Will the Government be pleased to state :—

(*a*) the names of all the major irrigation projects that were contemplated to be taken up during III Five-Year Plan in the State;

(*b*) how many of them are started;

(*c*) the number of projects which are not started and reasons for the same;

(*d*) the names of projects pending before C.W. and P.C. for clearance and the duration of pendency in each case ?

*A.—Sri S. NIJALINGAPPA (Chief Minister).—

(*a*) 1. Upper Krishna Project;
2. Malaprabha Project;
3. Harangi Reservoir Project.

(*b*) Three (Upper Krishna, Malaprabha and Harangi Projects).

(*c*) Does not arise in view of reply to clause (*b*) above.

(*d*) Harangi Reservoir Project since November 1963.

Sri M. C. BASAPPA.—May I know total cost of the three projects ?

Sri B. D. JATTI.—They are to be taken in different phases. As far as Upper Krishna is concerned, the rough estimate of the entire project is 116 crores. Malaprabha for the present, we have not got final estimates. But we have called for tenders for dam foundation and for the tunnel wor . Dam foundation is estimated at 24 lakhs. Tenders have been accepted. Regarding the tunnel, it is 3.2 crores. Regarding Harangi, modified proposal is estimated to cost 11 crores.

ಶ್ರೀ ಎಸ್. ಎಂ. ಕೃಷ್ಣ.—ಹಾರಂಗಿ ಜಲಾಶಯದ ಸ್ಕೆಟಿನ ಬಗ್ಗೆ ಎದ್ದಿದ್ದ ವಿವಾದದ ಬಗ್ಗೆ ಸರ್ಕಾರದವರು ಏನು ತೀರ್ಮಾನಕ್ಕೆ ಬಂದಿದ್ದಾರೆ ?

Sri B. D. JATTI.—The original proposal was sent to the Government of India in 1963. After having detailed discussion with the Government of India, revised proposal is being considered and the proposal has been sent to the Government of India.

ಶ್ರೀ ಎಸ್. ಎಂ. ಗುರೆಡ್ಡಿ.—ಕೃಷ್ಣಾ ನದಿಯ ಮೇಲ್ದಂಡೆಯ ಹಾಗೂ ನಾರಾಯಣಪುರ ಮತ್ತು ಆಲಮಟ್ಟಿ ಪ್ರಾಜೆಕ್ಟುಗಳ ಬಗ್ಗೆ ಜಲ ಮತ್ತು ವಿದ್ಯುತ್ ಆಯೋಗದವರು ಮಂಜೂರು ಮಾಡಿರತಕ್ಕ ಹಣವೆಷ್ಟು ಮತ್ತು ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟನ್ನು ಖರ್ಚುಮಾಡಲಾಗಿದೆ ?

ಶ್ರೀ ಬಿ. ಡಿ. ಜತ್ತಿ.—ಅವರು ಒಂದೊಂದನ್ನೇ ಕೇಳಿದರೆ ಉತ್ತಮ.

ಶ್ರೀ ಎಸ್. ಎಂ. ಗುರೆಡ್ಡಿ.—ಮೇಲಿನ ಜಲಾಶಯಗಳಿಗೆ ಸಿ. ಡಬ್ಲು. ಪಿ. ಸಿ. ಅವರು ಮಂಜೂರಾತಿ ಕೊಟ್ಟಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಹೌದು.

ಶ್ರೀ ಎಸ್. ಎಂ. ಗುರೆಡ್ಡಿ.—ನಮ್ಮ ಸರ್ಕಾರದವರು 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣವನ್ನು ಖರ್ಚುಮಾಡಬೇಕೆಂದು ಮಾಡಿದ್ದಾರೆ ?

Sri B. D. JATTI.—Sir, the intention of the Government of Mysore is to spend as much as possible. It is dependent upon the money which we get from the Government of India.

ಶ್ರೀ ಎಸ್. ಎಂ. ಕೃಷ್ಣ.—116 ಕೋಟಿಯಲ್ಲಿ ಇದುವರೆಗೂ ಅಪ್ಪರ್ ಕೃಷ್ಣಾ ಯೋಜನೆಗೆ ಖರ್ಚಾಗಿರತಕ್ಕ ಹಣವೆಷ್ಟು ?

Sri B. D. JATTI.—Sir, in Upper Krishna, preliminary work was started in 1962. Dam excavation started in February 1964 and for excavation, so far the money spent or is likely to be spent is Rs. 30 lakhs.

Sri S. S. KOLKEBAIL.—Is it a fact that the Central Government has taken the responsibility of meeting the entire cost of these major irrigation schemes ?

Sri B. D. JATTI.—That question was discussed in the meeting of the Chief Ministers and also in the meeting of the National Development Council. So far no final decision has been taken.

Sri GANJI VEERAPPA.—May I know, whether at this rate the projects will not be completed even for ten years ? To expedite the projects, is it not necessary to secure more funds and get more assistance from the Centre.

Sri B. D. JATTI.—Sir, according to information that is made available to the Government of Mysore, it is the intention of the Government of India to complete all these projects by the end of the Fourth Five-Year Plan.

ಶ್ರೀ ಬಿ. ಬೈರಪ್ಪಾಜಿ.—ಭಾರಿ ನೀರಾವರಿ ಯೋಜನೆಗಳಲ್ಲಿ ಹೇಮಾವತಿ ಪ್ರಾಜೆಕ್ಟನ್ನೂ ಕೂಡ ಸೇರಿಸಿ ಈ ಮೂರನೆ ಪಂಚವಾರ್ಷಿಕ ಯೋಜನೆಗಳಲ್ಲಿ ತೆಗೆದುಕೊಳ್ಳಬೇಕೆಂದು ನಮ್ಮ ಸರ್ಕಾರದವರು ಉದ್ದೇಶಿಸಿರಲಿಲ್ಲವೇ ?

Sri B. D. JATTI.—Sir, the Hemavathi Reservoir Project originally was costing Rs. 390 lakhs and it was to irrigate 30,000 acres. Now the entire project has been recast and re-examined and the revised estimated cost now stands at 16.3 crores and it will irrigate one lakh of acres in the first stage and 1,45,000 acres in the second and ultimate stage.

Sri G. V. GOWDA.—Sir, so far as Harangi is concerned, you were pleased to say there is a revised proposal. I wish to know at whose instance the revised proposal was sent ? Is it at the instance of the CWPC ?

Sri B. D. JATTI.—It was at the instance of the experts from the Government of India and the whole question was to be re-examined and after re-examination the second proposal has been sent and that may get the approval from the Centre.

9-00 A.M.

ಶ್ರೀ ಪಾಲಿ ಚನ್ನಪ್ಪ.—ಮಲಪ್ರಭಾ ಯೋಜನೆಯನ್ನು ದೊಡ್ಡದಾಗಿ ಮಾಡುತ್ತೀರೋ ಇಲ್ಲವೊ ?

ಶ್ರೀ ಬಿ. ಡಿ. ಜತ್ತಿ.—ದೊಡ್ಡದಾಗಿ ಎಂದು ಅವರು ಕೇಳಿದ್ದು ಅರ್ಥವಾಗಲಿಲ್ಲ.

ಶ್ರೀ ಎಚ್. ವೆಂಕಟರೆಡ್ಡಿ.—ಬಲದಂಡೆ ಕೆಲಸ ಈಗ ಮುಂಜೂರಾಗಿದೆ ; ಎಡದಂಡೆ ಕೆಲಸವನ್ನು ಮುಂಜೂರು ಮಾಡುತ್ತೀರಾ ? ಅದೂ ಇದರಲ್ಲಿ ಸೇರಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಎರಡೂ ದಂಡೆ ಇದೆ. ಆದರೆ ಈಗ ಇದರ ತಳಹದಿಯ ಕೆಲಸಕ್ಕೆ 24 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ, ಘಾನರ್ ಕೆಲಸಕ್ಕೆ 3 ಕೋಟಿ 20 ಲಕ್ಷ ಖರ್ಚು ಮಾಡಲು ಟೆಂಡರು ಕರೆದಿದೆ, ಬೇಗ ಫೈನಲ್ ಆಗಬಹುದು.

ಶ್ರೀ ಎಸ್. ಶಿವಪ್ಪ.—ಕಾವೇರಿ ವ್ಯಾಲಿ ನೀರನ್ನು ಉಪಯೋಗಿಸುವ ಬಗ್ಗೆ ಮದ್ರಾಸು ಮತ್ತು ಮೈಸೂರಿಗೆ ಆಗಿರುವ ಒಪ್ಪಂದ 72ನೇ ಇಸವಿಗೆ ಮುಗಿಯುವುದಾಗಿದ್ದರೂ ಸಹ, ಹೇಮಾವತಿ ಯೋಜನೆಗೆ ಪ್ಲಾನು ಅಂದಾಜು ವಗೈರೆ ಆಗಿದ್ದರೂ ಕೂಡ, ಅನೇಕ ವರ್ಷಗಳಿಂದ ಪುನರ್ಪರಿಶೀಲನೆ ಮಾಡಬೇಕೆಂಬ ನೆಪ ಒಡ್ಡಿ ಅದನ್ನು ಮುಂದಕ್ಕೆ ತಳ್ಳುತ್ತಿರುವುದಕ್ಕೆ ಕಾರಣವೇನು ?

Mr. SPEAKER.—How does it arise ? What is the significance of the Hemavathi ?

Sri S. SIVAPPA.—Because it is one of the main projects.

Mr. SPEAKER.—How does it come under this question ?

Sri S. SIVAPPA.—This question is about major irrigation projects in the State.

Is it not a fact that the Chief Minister gave a categorical assurance on the floor of the House last year that the Hemavathi Project is going to be taken up ?

Sri B. D. JATTI.—Originally Hemavathi Irrigation Project came under the category of a medium project. Now, since it has been revised, because the cost has gone up and the area under irrigation will be much more, it comes under the category of major projects. And, that will be taken up provided we get money.

ಶ್ರೀ ಎಸ್. ಎಂ. ಗುರೆಡ್ಡಿ.—ನಾರಾಯಣಪುರ ಯೋಜನೆಗೆ ಮಂಜೂರಾತಿ ದೊರೆತರೂ ಸಹ ಸೈಟನ್ನು ಬದಲಾಯಿಸಲು ಕಾರಣವೇನು ?

Sri B. D. JATTI.—Sir, it was after discussion by the experts from the Government of India and our experts, that Narayanapura site was not found suitable and so it was shifted to Siddapura. By this the cost will be reduced and the area to be irrigated will be the same.

Sri S. SIVAPPA.—What is the cost involved by shifting, or what is the loss to the Government ?

Mr. SPEAKER.—Is it by reduction or by enhancement ? Both are possible.

Sri B. D. JATTI.—The cost will be reduced. Sir, the total amount spent is eight lakhs of rupees on Narayanapura site, out of which two lakhs is for foundation and six lakhs for buildings, approach roads and other things.

Sri M. C. BASAPPA.—Has it come to the notice of the Government that they are not able to spend 40 crores of rupees in the Third Five-Year Plan itself for the major irrigation projects ?

Sri B. D. JATTI.—Whatever will be possible to be spent by our P. W. D. we will surely spend.

ಶ್ರೀ ಎಸ್. ಗೋಪಾಲ ಗೌಡ.—ನ್ಯಾಯವು ನಾರಾಯಣಪುರ ಯೋಜನೆಯ ಸೈಟನ್ನು ಪ್ರವೀಣರು ಪರಿಶೀಲಿಸಿದ ಮೇಲೆ ಬದಲಾಯಿಸಲಾಯಿತೆಂದು ಹೇಳಿದಿರಿ. ಮೊದಲು ಸೈಟನ್ನು ಗೊತ್ತು ಮಾಡುವಾಗ ಕೇವಲ ನಿಜಲಿಂಗಪ್ಪನವರು ಮತ್ತು ವೀರೇಂದ್ರ ಪಾಟೀಲರು ಪರಿಶೀಲಿಸಿ ಗೊತ್ತು ಮಾಡಿದರೋ ಅಥವಾ ನಿಮ್ಮ ಪ್ರವೀಣರು ಮತ್ತು ಕೇಂದ್ರದ ಪ್ರವೀಣರು ಪರಿಶೀಲಿಸಿ ಗೊತ್ತು ಮಾಡಿದರೋ ?

ಶ್ರೀ ಬಿ. ಡಿ. ಜತ್ತಿ.—ಮೊದಲು ನಮ್ಮ ಪ್ರವೀಣರು ಪರಿಶೀಲಿಸಿ ಕೇಂದ್ರಕ್ಕೆ ತಿಳಿಸಿದರು. ನಂತರ ಕೇಂದ್ರದ ಮಂತ್ರಿಗಳು ಸ್ವತಃ ನೋಡಿದ ಮೇಲೆ ಅವರ ಕಡೆ ಪ್ರವೀಣರು ಮತ್ತು ನಮ್ಮ ಕಡೆ ಪ್ರವೀಣರು ನೋಡಿ ಸೈಟನ್ನು ಬದಲಾಯಿಸುವುದು ಅವಶ್ಯವೆಂದು ಸಲಹೆ ಮಾಡಿದರು.

ಶ್ರೀ ವಿ. ಮುನಿಯಪ್ಪ.—ಹೇಮಾವತಿ ಯೋಜನೆಯ ಎರಡನೆಯ ಹಂತದ ಕೆಲಸವಾದ ಮೇಲೆ ಯಾವ ಯಾವ ತಾಲ್ಲೂಕುಗಳಿಗೆ ಅದರ ಪ್ರಯೋಜನವಾಗುತ್ತದೆ?

Sri B. D. JATTI.—I have not got all those details.

ಶ್ರೀ ಜೆ. ದೇವಯ್ಯ.—ಈ ಮೂರು ಯೋಜನೆಗಳು ಯಾವ ಯಾವ ಜಿಲ್ಲೆಗಳಿಗೆ ಸೇರಿವೆ ?

ಶ್ರೀ ಬಿ. ಡಿ. ಜತ್ತಿ.—ಹಾರಂಗಿ ಯೋಜನೆ ಕೊಡಗು, ಹಾಸನ ಮತ್ತು ಮೈಸೂರು ಜಿಲ್ಲೆ, ಅಪ್ಪರ್ ಕೃಷ್ಣಾ ಯೋಜನೆ ಮುಂಬಯಿ ಮತ್ತು ಹೈದರಾಬಾದು ಕರ್ನಾಟಕ, ಮಲಪ್ರಭ ಯೋಜನೆ ಧಾರವಾಡ ಮತ್ತು ಕೆಲಮಟ್ಟಿಗೆ ಬಿಜಾಪುರ ಜಿಲ್ಲೆಗಳಿಗೆ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಹಾರಂಗಿ ಯೋಜನೆಗೆ 1963ನೆ ನವೆಂಬರಿನಿಂದ ಕ್ಲಿಯರೆನ್ಸ್ ದೊರೆತಿಲ್ಲ ಎಂದು ಹೇಳಿದೆ. ಈ ಮಧ್ಯೆ ತಳಪಾಯದ ಕೆಲಸ ವಗೈರೆ ಕೆಲಸಗಳು ಪ್ರಾರಂಭವಾಗಿವೆ. ಇದಕ್ಕೂ ನಾರಾಯಣಪುರ ಯೋಜನೆಯ ಗತಿಯೇ ತಾನೇ ?

ಶ್ರೀ ಬಿ. ಡಿ. ಜತ್ತಿ.—ನಾರಾಯಣಪುರದ ಬಳಿ ಕಟ್ಟಿರುವ ಕಟ್ಟಡಗಳು ವಗೈರೆ ಸಿದ್ದಾಪುರಕ್ಕೂ ಉಪಯೋಗವಾಗುತ್ತವೆ. ಅದೇ ರೀತಿ ಮಾನ್ಯ ಸದಸ್ಯರು ಹೇಳಿದ ಸಂದರ್ಭದಲ್ಲೂ ಉಪಯೋಗವಾಗುವುದು.

ಶ್ರೀ ಬಿ. ಚನ್ನಬ್ಯೆರೇಗೌಡ.—ನಾರಾಯಣಪುರ ಅಣೆಕಟ್ಟಿಗಾಗಿ ಮೊದಲು ಚುನಾಯಿಸಿದ ಸೈಟಿನ ಬಳಿ ಕಟ್ಟಡ ವಗೈರೆ ನಿರ್ಮಿಸಿದ್ದು ಈಗ ಉಪಯೋಗವಿಲ್ಲದೆ ವ್ಯರ್ಥ ಹಣ ಖರ್ಚಾಗಿಲ್ಲವೆ?

ಶ್ರೀ ಬಿ. ಡಿ. ಜತ್ತಿ.—ಇಲ್ಲ. ಅಲ್ಲಿರುವ ಕಟ್ಟಡ ವಗೈರೆ ಈಗ ಸಿದ್ದಾಪುರಕ್ಕೂ ಉಪಯೋಗವಾಗುತ್ತವೆ. ಆದುದರಿಂದ ಆ ವಿಚಾರದಲ್ಲಿ ಯೋಚನೆ ಮಾಡಬೇಕಾದ ಅಗತ್ಯವಿಲ್ಲ.

ಶ್ರೀ ಎಸ್. ಎಸ್. ಕೊಳ್ಳೇಬ್ಯೆಲ್.—ಹಾರಂಗಿ ಯೋಜನೆಯು 5ನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಾದರೂ ಮುಗಿಯಬಹುದೇ ?

Sri B. D. JATTI.—I replied that all the major projects are likely to be completed by the end of the Fourth Five-Year Plan. But if it is the intention of the Hon'ble Member to take these up to the Fifth Plan, Government will consider.

(*Laughter*)

ಶ್ರೀ ಎಸ್. ಶಿವಪ್ಪ.—ನಾರಾಯಣಪುರದ ಯೋಜನೆಗೆ ಸಂಬಂಧಿಸಿದಂತೆ ಹಾಕಿರುವ ಅಸ್ತಿ ಭಾರ ಶಿಲೆ ಸೈಟನ್ನು ಸ್ಥಳಾಂತರಿಸುವುದರಿಂದ ಮುಳುಗಿ ಹೋಗುತ್ತದೆಯೇ ಅಥವಾ ಉಳಿಯುತ್ತದೆಯೆ

ಶ್ರೀ ಬಿ. ಡಿ. ಜತ್ತಿ.—ಆ ಶಿಲೆಯನ್ನೇ ಸಿದ್ದಾಪುರದ ಹತ್ತಿರ ತಂದಿಡಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೇಮಾವತಿ ಯೋಜನೆ ಪರಿಶೀಲನೆ ಯಾವಾಗ ಪ್ರಾರಂಭವಾಯಿತು ? ಯಾವಾಗ ಕೈನಲ್ಲಾಗುವುದು ?

ಶ್ರೀ ಬಿ. ಡಿ. ಜತ್ತಿ.—ಮೂರನೆಯ ಯೋಜನೆಯಲ್ಲಿ ತೆಗೆದುಕೊಳ್ಳಲಾಯಿತು.

ಶ್ರೀ ಎಂ. ಸಿ. ಬಸಪ್ಪ.—ಮೂರನೆಯ ಯೋಜನೆಯಲ್ಲಿ 40 ಕೋಟಿ ರೂಪಾಯಿಗಳನ್ನು ಭಾರಿ ಯೋಜನೆಗಳಿಗಾಗಿ ಖರ್ಚು ಮಾಡಲು ಸರ್ಕಾರದ ಬಳಿ ತಕ್ಕಷ್ಟು ಸಿಬ್ಬಂದಿ ಇಲ್ಲವೇ ?

Sri B. D. JATTI.—We have sufficient staff to implement all the projects provided we get money and clearance from the Government of India.

Crops affeeted due to heavy rains under the Atchkat of Lingannanakere in Bangalore South Taluk.

**Q.*—289. Sri D. MUNICHINNAPPA (Bangalore South).—

Will the Government be pleased to state :—

(*a*) the extent of land under the atchkat of Lingannanakere in Bangalore South Taluk, wherein crops were washed away due to overflow of wasteweir on account of heavy rains in this year;